E.P.No.34/2023
RW.1

ಇಂದು ದಿನಾಂಕ: 20-02-2024 ರಂದು
ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು

**ಪಾಟಿ ಸವಾಲು: 3 ನೇ ಅರ್ಜಿದಾರರ ಪರ ಶ್ರೀ.ಸಿ.ಕೆ.ಆರ್. ವಕೀಲರಿಂದ :-**

OS No. 102/2014 ರಲ್ಲಿ ತೀರ್ಪು ಆಗುವುದಕ್ಕಿಂತ ಐದೂವರೆ ವರ್ಷಕ್ಕಿಂತ ಮೊದಲು ಪ್ರಸ್ತುತ 3 ನೇ ಅರ್ಜಿದಾರರು OS no. 277/2012 ರಲ್ಲಿ ಪ್ರಿಲಿಮಿನರಿ ಡಿಕ್ರಿ ಪಡೆದುಕೊಂಡಿದ್ದಾರೆ ಎಂದರೆ ಸರಿ. ನಂತರ ಪ್ರಸ್ತುತ 3 ನೇ ಅರ್ಜಿದಾರರು OS NO. 277/2012 ತೀರ್ಪಿನ ಆಧಾರದ ಮೇಲೆ FDP NO. 55/2014 ರಲ್ಲಿ ಆದೇಶ ಪಡೆದಿದ್ದಾರೆ ಎಂದರೆ ಸರಿ. ಸದರಿ FDP ದಲ್ಲಿ ಆದ ಆದೇಶದ ಪ್ರಕಾರ ಪಹಣಿ ಪತ್ರಿಕೆಯಲ್ಲಿ ಪ್ರಸ್ತುತ 3 ನೇ ಅರ್ಜಿದಾರರ ಹೆಸರು ಬಂದಿದೆ ಎಂದರೆ ಸರಿ. OS No. 102/2014 ರಲ್ಲಿ ನಾನು OS no. 277/2012 ರ ತೀರ್ಪಿನ ಪ್ರತಿಯನ್ನು ಸಲ್ಲಿಸಿಲ್ಲ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು OS no. 277/2012 ರಲ್ಲಿ ನಾನು ಪಾರ್ಟಿ ಇರಲಿಲ್ಲ ಮತ್ತು ಅದರಲ್ಲಿ ತೀರ್ಪಾದ ಸಂಗತಿ ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ಪ್ರಸ್ತುತ ಇ.ಪಿ.ಯಲ್ಲಿ ನಿ.ಆರ್-7 ನಾನೇ ಸಲ್ಲಿಸಿದ್ದೇನೆ ಎಂದರೆ ಸರಿ. OS No. 277/2012 ರಲ್ಲಿ ಪ್ರಸ್ತುತ 3 ನೇ ಅರ್ಜಿದಾರರು ಡಿಕ್ರಿ ಪಡೆದುಕೊಂಡಿರುವುದು ನನ್ನ ಗಮನದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. OS No. 277/2012 ರಲ್ಲಿ ತೀರ್ಪಾದ ಬಗ್ಗೆ ನನಗೆ 2017 ರಲ್ಲಿ ಗೊತ್ತಾಗಿದೆ. OS No. 277/2012 ರ ತೀರ್ಪನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ನಿ.ಪಿ.4 ಮತ್ತು 5 ನ್ನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡುವ ಮತ್ತು ಸುಳ್ಳು ಸಾಕ್ಷ್ಯಗಳನ್ನು ನ್ಯಾಯಾಲಯಗಳ ಮುಂದೆ ಇಡುವ ಕೆಟ್ಟ ಚಾಳಿ ಇದೆ ಎಂದರೆ ಸರಿಯಲ್ಲ. OS No. 277/2012 ರ ತೀರ್ಪಾದ

ನಂತರ ಪ್ರಸ್ತುತ 3 ನೇ ಅರ್ಜಿದಾರರು ದಾವಾ ಆಸ್ತಿಯ ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿಯಲ್ಲ. OS 277/2012 ರ ಬಗ್ಗೆ ತೀರ್ಪಾದ ಬಗ್ಗೆ ನನಗೆ ಮಾಹಿತಿ ಇದ್ದರೂ ಕೂಡಾ OS no. 102/2014 ರಲ್ಲಿ ನ್ಯಾಯಾಲಯದ ಗಮನಕ್ಕೆ ತರದೇ ಸುಳ್ಳು ಡಿಕ್ರಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. 3 ನೇ ಅರ್ಜಿದಾರರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ
ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.